ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಆಯುಕ್ತಾಲಯ
ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು – 560 009.

ಸಂಖ್ಯೆ:ಕಪಂರಾಆ/ಅಭಿವೃದ್ಧಿ/ಗ್ರಂಥಾಲಯ/273/2023 ದಿನಾಂಕ:19.06.2023
C.No: 1105005

## ಸುತ್ತೋಲೆ

**ವಿಷಯ:-** ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ "ಓದುವ ಬೆಳಕು" ಅಂಗವಾಗಿ **"ಸಣ್ಣ ಕಥೆ ಬರೆಯುವ"** ಅಭಿಯಾನ ಆಯೋಜಿಸುವ ಕುರಿತು.

***

ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಮಕ್ಕಳು ಓದುವುದುರಲ್ಲಿ ಮತ್ತು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು "ಓದುವ ಬೆಳಕು" ಕಾರ್ಯಕ್ರಮವನ್ನು ಆರಂಭಿಸಲಾಗಿದೆ. ಸದರಿ ಕಾರ್ಯಕ್ರಮದ ಮೂಲಕ ಶಾಲಾ ಮಕ್ಕಳನ್ನು, ವಿಶೇಷವಾಗಿ ಗ್ರಾಮೀಣ ಮಕ್ಕಳನ್ನು ವ್ಯವಸ್ಥಿತವಾಗಿ ಕಲಿಕಾ ಕ್ಷೇತ್ರಕ್ಕೆ ಮರಳಿ ತರುವ ಹಾಗೂ ನಿರಂತರತೆಯನ್ನು ಕಾಪಾಡುವ ಗುರಿಯನ್ನು ಹೊಂದಲಾಗಿದೆ. ಗ್ರಂಥಾಲಯಗಳನ್ನು ಗ್ರಾಮೀಣ ಜ್ಞಾನ ಕೇಂದ್ರಗಳನ್ನಾಗಿಸಲು ಗ್ರಂಥಾಲಯಗಳ ನವೀಕರಣ, ಡಿಜಿಟಲೀಕರಣ ಸೇರಿದಂತೆ ವಿವಿಧ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಮುಂದುವರೆದು, "ಓದುವ ಬೆಳಕು" ಕಾರ್ಯಕ್ರಮದಡಿಯಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಹಲವಾರು ಅಭಿಯಾನಗಳ ಮೂಲಕ ಪ್ರತಿ ತಿಂಗಳು ಉಪಯುಕ್ತ ಚಟುವಟಿಕೆಯನ್ನು ಆಯೋಜಿಸಲಾಗಿರುತ್ತದೆ. ಹೀಗೆ ಗ್ರಂಥಾಲಯಗಳನ್ನು ಸದುಪಯೋಗ ಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ. ಅದರಂತೆ, ಮಕ್ಕಳ ಕಲ್ಪನಾ ಶಕ್ತಿಯನ್ನು ಉತ್ತೇಜಿಸುವ ಹಾಗೂ ಅದನ್ನು ಕಥೆಯ ರೂಪದಲ್ಲಿ ತರುವ ಸಲುವಾಗಿ ಮಕ್ಕಳಿಗೆ ಕಥೆ ಬರೆಯುವ ಸ್ಪರ್ಧೆಯನ್ನು ಆಯೋಜಿಸಲಾಗುತ್ತಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು **ಜುಲೈ-2023 ಮಾಹೆಯಲ್ಲಿ "ಸಣ್ಣ ಕಥೆ ಬರೆಯುವ" ಅಭಿಯಾನವನ್ನು** ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳಲ್ಲಿ ಆಯೋಜಿಸಲು ನಿರ್ಧರಿಸಿದೆ.

**<u>ಅಭಿಯಾನದಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳು:</u>**

- 5 ರಿಂದ 16 ವರ್ಷದ ವರೆಗಿನ ಮಕ್ಕಳಿಗೆ ಸಣ್ಣ ಕಥೆಯನ್ನು ಬರೆಯಲು ಮಕ್ಕಳಿಗೆ ಮನನ ಮಾಡಿಸುವುದು.
- ಈ ವಿಷಯಗಳ ಕುರಿತು ಉದಾ: ಗ್ರಂಥಾಲಯದ ಬಗ್ಗೆ ಕಥೆ, ಪ್ರಾಣಿಗಳ ಬಗ್ಗೆ ಕಥೆ, ನೀತಿ ಕಥೆಗಳು, ನಿಮ್ಮ ಬಾಲ್ಯದ ಕಥೆಗಳು,ನಿಮ್ಮ ಸ್ನೇಹಿತರು ಮತ್ತು ಕುಟುಂಬದ ಕಥೆಗಳು, ರಜೆಯ ಬಗ್ಗೆ ಕಥೆಗಳು, ನಿಮ್ಮ ಊರು, ನಿಮ್ಮ ನೆಚ್ಚಿನ ನಗರ ಅಥವಾ ನೀವು ಬರೆಯಲು ಬಯಸುವ ಯಾವುದೇ ಕಥೆಗಳನ್ನು ಬರೆಯಲು ಮಕ್ಕಳಿಗೆ ತಿಳಿಸುವುದು.
- ಕನಿಷ್ಠ 250 ಪದಗಳು 90 ನಿಮಿಷದಲ್ಲಿ ಕಥೆಯನ್ನು ಬರೆದು ಮುಗಿಸಬೇಕು.
- ವಿಜೇತರನ್ನು ಜುಲೈ 30 ರಂದು ಘೋಷಿಸಲಾಗುವುದು.
- ವಿಜೇತರು ಜುಲೈ 30 ರಂದು ಹಾಜರಿರುವ ಎಲ್ಲರೊಂದಿಗೆ ತಮ್ಮ ಕಥೆಗಳನ್ನು ಓದುವುದು.
- ಅತ್ಯುತ್ತಮ ಕಥೆಗಳನ್ನು ಲೇಖಕರ ಚಿತ್ರದೊಂದಿಗೆ (ಮಕ್ಕಳ ಚಿತ್ರ) ಗ್ರಂಥಾಲಯದಲ್ಲಿ ಪ್ರತಿಯೊಬ್ಬರೂ ಓದಲು ಪುಸ್ತಕದಲ್ಲಿ ಸಂಕಲಿಸಲು ಕ್ರಮವಹಿಸುವುದು.
- ಮಕ್ಕಳಿಗೆ ತಮ್ಮ ಸ್ವಂತ ಕಥೆಗಳನ್ನು ಬರೆಯಲು ಸಹಾಯ ಮಾಡಲು ಗ್ರಂಥಪಾಲಕರಿಗೆ ಮಾದರಿ ಕಥೆ ಮಾರ್ಗದರ್ಶಿಯು ಈ ಕೆಳಕಂಡಂತೆ ಇದೆ.
- ಗ್ರಂಥಪಾಲಕರು ಸಣ್ಣ ಕಥೆಯನ್ನು ಬರೆಯಲು ಪ್ರಾರಂಭಿಸುವ ಮೊದಲು ಎಲ್ಲಾ ಮಕ್ಕಳೊಂದಿಗೆ ನಕ್ಷೆ ಮತ್ತು ಯೋಜನೆಯನ್ನು ಚರ್ಚಿಸುವುದು.

- ಸಣ್ಣ ಕಥೆಯ ನಕ್ಷೆ ಯೋಜನೆಯನ್ನು ರೂಪಿಸುವುದು.
- ಶೀರ್ಷಿಕೆಯಲ್ಲಿ ಕಥೆಯ ಹೆಸರನ್ನು ಬರೆಯುವುದು.

1. **ಕಥಾ ವಸ್ತುವಿನಲ್ಲಿ ಅಂದರೆ**:1) ಕಥಾವಸ್ತುವನ್ನು ಪರಿಚಯಿಸುವುದು, ಯಾವ ಸ್ಥಳ, ಯಾವ ವರ್ಷ, ಸ್ಥಳವು ಹೇಗೆ ಕಾಣುತ್ತದೆ, ಅದು ಏನು ಹೊಂದಿದೆ? ಮನೆಗಳು, ಪ್ರಾಣಿಗಳು, ಅಂಗಡಿಗಳು, ಜನ, ಶಾಲೆಗಳು, ಹಳ್ಳಿ ಅಥವಾ ಪಟ್ಟಣ ಅಥವಾ ಮನೆ ಅಥವಾ ಅರಣ್ಯ ಕುರಿತು ಬರೆಯಲು ತಿಳಿಸುವುದು.
2. **ಪಾತ್ರಗಳು ಅಂದರೆ**: ಪಾತ್ರಗಳನ್ನು ಪರಿಚಯಿಸುವುದು, ಅವರ ವಯಸ್ಸು ಎಷ್ಟು ಅವರು ಹೇಗೆ ಕಾಣುತ್ತಾರೆ ಎನ್ನುವುದರ ಕುರಿತು ಸಣ್ಣ ಕಥೆಯಲ್ಲಿ ಬರೆಯುವುದು.
3. **ಸಮಸ್ಯೆ:** ಸಮಸ್ಯೆಯನ್ನು ಪರಿಚಯಿಸಿ ಅಥವಾ ಪಾತ್ರಕ್ಕೆ ಏನಾಗುತ್ತಿದೆ, ಮುಖ್ಯ ಪಾತ್ರಕ್ಕೆ ಏನು ಬೇಕು?ಅವನು/ಅವಳನ್ನು ಪಡೆಯುವುದನ್ನು ತಡೆಯುವುದು ಯಾವುದು ಎಂಬುವುದರ ಬಗ್ಗೆ ಕಥೆಯಲ್ಲಿ ತಿಳಿಸುವುದು.
4. **ನಾಟಕ:** ಕಥೆಯಲ್ಲಿ ನಾಟಕೀಯ ತಿರುವು ನೀಡಿ, ಮುಖ್ಯ ಪಾತ್ರವು ಸಮಸ್ಯೆಯನ್ನು ಹೇಗೆ ಎದುರಿಸುತ್ತದೆ? ಈ ಅನುಭವವು ಪಾತ್ರವನ್ನು ಹೇಗೆ ಬದಲಾಯಿಸುತ್ತದೆ ಎನ್ನುವುದರ ಕುರಿತು ಬರೆಯುವುದು.
5. **ಪರಿಹಾರ:** ಬೇರೆಯವರ ಸಹಾಯದಿಂದ ಕಥೆಯನ್ನು ಮುಖ್ಯ ಪಾತ್ರದೊಂದಿಗೆ ಕೊನೆಗೊಳಿಸುವುದೇ? ಅಥವಾ ಕೇವಲ ಮುಖ್ಯ ಸಮಸ್ಯೆಯನ್ನು ಪರಿಹರಿಸುವುದೇ? ಅಂತಿಮ ಪರಿಹಾರವೇನು?ಕಥೆ ಹೇಗೆ ಕೊನೆಗೊಳ್ಳುತ್ತದೆ?ಭಾವನೆಗಳು ಯಾವುವು ಸಂತೋಷ ಮತ್ತು ದು:ಖ ಎಂಬುವುದರ ಕುರಿತು ಬರೆಯಲು ತಿಳಿಸುವುದು.

ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಮಕ್ಕಳಿಗೆ "ಸಣ್ಣ ಕಥೆ ಬರೆಯುವ ಅಭಿಯಾನ" ಚಟುವಟಿಕೆಯನ್ನು ಆಯೋಜಿಸುವುದರ ಮೂಲಕ ಕ್ರಮ ಕೈಗೊಳ್ಳುವುದು.

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಬೆಂಗಳೂರು.

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
3. ರಾಜ್ಯದ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ(ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
4. ಗ್ರಾಮ ಪಂಚಾಯಿತಿಯ ಗ್ರಂಥಾಲಯ ಮೇಲ್ವಿಚಾರಕರುಗಳಿಗೆ(ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ)
5. ಮಾಹಿತಿ ಕೇಂದ್ರ/ವೆಬ್ಸೈಟ್, ಗ್ರಾಅಪ ಇಲಾಖೆ.
6. ಮಾಹಿತಿ ಕೇಂದ್ರ/ವೆಬ್‌ಸೈಟ್, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
4. ಕಛೇರಿ ಪ್ರತಿ.